ಮಂಡಲ ಪಂಚಾಯತಿಯ ಪ್ರಧಾನರುಗಳಿಗೆ ಈ ಬಗ್ಗೆ ಕ್ರಮ ಕೈಗೊಳ್ಳಲು ಜಿಲ್ಲಾ ಪರಿಷತ್‌ನಿಂದ ಸೂಚನೆಗಳನ್ನು ನೀಡಲಾಗಿದೆ. ಸಾಮಾನ್ಯವಾಗಿ ದಹನ ಕ್ರಿಯೆಗಳನ್ನು ಸರ್ಕಾರಿ ಜಮೀನಾದ ಹಳ್ಳ ಖರಾಬ, ಹುಲ್ಲಬನಿ ಖರಾಬ ಗೋಮಾಳ ಭೂಮಿ, ನದಿ ದಂಡೆ ಕೆರೆದಂಡೆ ಮಂತಾದೆಡೆಗಳಲ್ಲಿ ನಡೆಸುತ್ತಿರುತ್ತಾರೆ. ಸರ್ಕಾರಿ ಜಮೀನು ಲಭ್ಯವಿರದಿದ್ದಾಗ ಸಾರ್ವಜನಿಕರಿಂದ ಭೂಸ್ವಾಧೀನ ಮಾಡಿಕೊಳ್ಳಲು ಭೂ ಸ್ವಾಧೀನ ಕಾಯ್ದೆಯನ್ವಯ ಕ್ರಮ ಕೈಗೊಳ್ಳಲಾಗುತ್ತಿದೆ.

ಸಣ್ಣ ಪತ್ರಿಕೆಗಳ ಅಭಿವೃದ್ಧಿ ಒಪ್ಪಿಗೆ ಬಗ್ಗೆ.

289 - ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ): ಮಾನ್ಯ ವಾರ್ತಾ ಮತ್ತು ಪ್ರವಾಸೋದ್ಯಮ ರಾಜ್ಯ ಸಚಿವರು. ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಸಣ್ಣ ಪತ್ರಿಕೆಗಳ ಅಭಿವೃದ್ಧಿಗಾಗಿ ನೇಮಿಸಿದ್ದ ಎಂ.ಬಿ. ಸಿಂಗ್ ವರದಿಯನ್ನು ಸರ್ಕಾರವು ಒಪ್ಪಿದಿಯೆ?

ಶ್ರಿ ಕೆ. ಶಿವಮೂರ್ತಿ (ವಾರ್ತಾ ಮತ್ತು ಪ್ರವಾಸೋದ್ಯಮ ರಾಜ್ಯ ಸಚಿವರು):

ಅ) ಎಂ.ಬಿ. ಸಿಂಗ್ ವರದಿಯನ್ನು ಅನುಷ್ಠಾನಕ್ಕೆ ತರುವ ವಿಷಯ ಸರ್ಕಾರದ ತೀವ್ರ ಪರಿಶೀಲನೆಯಲ್ಲಿದೆ.

ನೀರಾವರಿ ಬಾಂಡ್‌ಗಳನ್ನು ನೀಡುವ ಪ್ರಸ್ತಾವೆ.

287 - ಶ್ರೀ ಬಸವರಾಜ ರಾಯ ರೆಡ್ಡಿ (ಯಲ್ಬುರ್ಗಿ) : ಮಾನ್ಯ ಭಾರಿ ಮತ್ತು ಮಧ್ಯಮ ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕರ್ನಾಟಕದಲ್ಲಿ ನಿರ್ಮಾಣದಲ್ಲಿರುವ ನೀರಾವರಿ ಯೋಜನೆಗಳನ್ನು ಪೂರ್ಣಗೊಳಿಸಲು ನೀರಾವರಿ ಬಾಂಡ್‌ಗಳನ್ನು ನೀಡುವ ಪ್ರಸ್ತಾವೆ ಇದೆಯೆ?

ಆ) ಹಾಗಿದ್ದಲ್ಲಿ ಈ ಬಾಂಡ್‌ಗಳನ್ನು ನೀಡಲು ಸರ್ಕಾ ಕೈಗೊಂಡಿರುವ ಕ್ರಮಗಳೇನು?

ಇ) ಸರ್ಕಾರವು ಕೇಂದ್ರದ ಒಪ್ಪಿಗೆ ಕೇಳಿದೆಯೇ?

ಈ) ಹಾಗಿದ್ದಲ್ಲಿ ಒಪ್ಪಿಗೆ ದೊರಕಿದೆಯೇ?

ಉ) ಉದ್ದೇಶಿಸಿರುವ ನೀರಾವರಿ ಬಾಂಡ್‌ನ ಮೊತ್ತವೆಷ್ಟು?

ಊ) ಈ ಉದ್ದೇಶಿತ ಬಾಂಡ್‌ಗಳನ್ನು ಕೊಳ್ಳುವವರಿಗೆ ಒದಗಿಸಲಾಗುವ ಸೌಲಭ್ಯಗಳೇನು?

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್ (ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು):

ಅ) ಹೌದು.

ಆ) ಈ ವಿಷಯದ ಬಗ್ಗೆ ಕೇಂದ್ರ ಸರ್ಕಾರದ ಅನುಮತಿಯನ್ನು ಕೋರಲಾಗಿದೆ.

ಇ) ಹೌದು.

ಈ) ಇದುವರೆಗೂ ದೊರೆತಿಲ್ಲ.

ಉ) ಕೇಂದ್ರ ಸರ್ಕಾರದ ಅನುಮತಿ ದೊರೆತ ನಂತರ ಈ ವಿವರಗಳು ತಿಳಿಯುವುವು.